**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 14.07.2021.

**1] ಚಡಚಣ ಪೊಲೀಸ ಠಾಣೆ ಗುನ್ನೆ ನಂ: 65/2021 ಕಲಂ: 302, 201 ಐಪಿಸಿ**

ಈಗ ಸುಮಾರು 2-3 ದಿವಸಗಳ ಹಿಂದೆ ಇದರಲ್ಲಿಯ ಆರೋಪಿತರಾದ 1] ಸುರೇಖಾ @ ಪಲ್ಲವಿ ತಂ: ವಿಕ್ರಮ ಕಾಟಕರ ಸಾ॥ ಇಂಡಿ [ರೇವಪ್ಪನ ಮಡ್ಡಿ] ಹಾಗು ಇವಳ ಮನೆಯ ಜನರು ಮತ್ತು ಇತರರು, ಇವಳು ಫಿರ್ಯಾದಿ ಮಗ ಅರವಿಂದನಿಗೆ ಪರಿಚಯ ಆಗಿ, ಅವಳೊಂದಿಗೆ ಮಾತನಾಡುವದು, ಸುರೇಖಾ ಇವಳು ಸಹ ಅರವಿಂಗನೊಂದಿಗೆ ಮಾತಾಡುವದು, ಸಲುಗೆಯಿಂದಾ ಇರುವದು ಮಾಡುತ್ತಿದ್ದರು, ಮುಂದೆ ಸುರೇಖಾ ಕಾಟಕರ ಇವಳಿಗೆ ಚಡಚಣಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ, ಅರವಿಂದನು ಸುರೇಖಾ ಇವಳೊಂದಿಗೆ ಸಲುಗೆಯಿಂದಾ ಇರುವದು, ಅವಳೊಂದಿಗೆ ಮಾತಾಡುವದು ಮಾಡುವುದರ ಬಗ್ಗೆ ಸಂಶಯ ತಾಳಿ ಸುರೇಖಾಳ ಮನೆಯ ಜನರು ಕೂಡಿಕೊಂಡು ಮೃತ: ಅರವಿಂದ ತಂ: ಮಲ್ಲಣ್ಣ ದ್ಯಾಪೂರ ಇವನಿಗೆ ಸುರೇಖಾಳ ಮುಖಾಂತರ ಚಡಚಣದ ಉಮದಿ ರಸ್ತೆಗೆ ಇರುವ ಆಶ್ರಯ ಕಾಲೋನಿಯ ಮನೆಗಳ ಹತ್ತಿರ ಕರೆಸಿಕೊಂಡು ಇತರರೊಂದಿಗೆ ಕೂಡಿ ಅರವಿಂದನಿಗೆ ಹರಿತವಾದ ಆಯುಧಗಳಿಂದಾ ತಲೆಯ ಮೇಲೆ, ಕುತ್ತಿಗೆಯ ಮೇಲೆ, ತಲೆಯ ಹಿಂಬಾಗ ಬಲವಾಗಿ ಹೊಡೆದು ಕೊಲೆ ಮಾಡಿರುತ್ತಾರೆ, ಮುಂದೆ ಕೊಲೆ ಮಾಡಿರುವುದನ್ನು ಮುಚ್ಚಿ ಹಾಕುವ ಸಲುವಾಗಿ ಆತನ ಹೆಣವನ್ನು ಸುಟ್ಟು ಸಾಕ್ಷಿ-ಪೂರಾವೆಗಳನ್ನು ನಾಶ ಮಾಡಿರುವ ಬಗ್ಗೆ ಫಿರ್ಯಾದದಲ್ಲಿ ನಮುದು ಇರುತ್ತದೆ. ಈ ಬಗ್ಗೆ ಮಲ್ಲಣ್ಣ ನಂದಪ್ಪ ದ್ಯಾಪೂರ ಸಾ॥ ಬೋರಗಿ ತಾ॥ ಸಿಂದಗಿ ಜಿ॥ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 13.07.2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 97/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 13.07.2021 ರಂದು 16.40 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಸಚಿನ ಚಂದ್ರಶೇಖರ ಅವತಾಡೆ ಸಾ: ಕಾಖಂಡಕಿ. 2) ಅಶೋಕ ಶಿವಪ್ಪ ಬರಡ್ಡಿ ಸಾ: ಕಾಖಂಡಕಿ. 3) ಸುನೀಲ ಅನುಬಾಯಿ ಬರಡ್ಡಿ ಸಾ: ಕಾಖಂಡಕಿ. ಇವರು ಕಾಖಂಡಕಿ ಗ್ರಾಮದ ಹಳ್ಯಾಕಟ್ಟಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯಿದೆಗೋಸ್ಕರ ಇಸ್ಪಿಟ್ ಎಲೆಗಳ ಸಹಾಯದಿಂದ ಪಣಕ್ಕೆ ಹಣ ಕಟ್ಟಿ ಅಂದರ ಬಾಹರ್ ಅನ್ನುವ ಇಸ್ಪೀಟ್ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲು 1) 52 ಇಸ್ಪೀಟ್ ಎಲೆಗಳು. ಅಂದಾಜ ಕಿಮ್ಮತ್-00 ರೂ. 2) ರೋಖ ಹಣ 4350/-ಗಳು. ಈ ಬಗ್ಗೆ ಸ:ತ: ಸೋಮನಗೌಡ. ಬಿ. ಗೌಡ್ರ ಪಿ.ಎಸ್.ಐ ಬಬಲೇಶ್ವರ ಪಿಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 13.07,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 202/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 13.07.2021 ರಂದು 16.45 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಸಿದ್ದಲಿಂಗ ಬಸಪ್ಪ ಹೆಬ್ಬಾಳಟ್ಟಿ ಸಾ: ಹೊನ್ನುಟಗಿ ಹಾಗೂ ಇನ್ನು 07 ಜನರು ಇವರು ಹೊನ್ನುಟಗಿ ಗ್ರಾಮದ ದರ್ಗಾದ ಹತ್ತಿರ ಸಾರ್ವಜನಿಕ ಸ್ಥಳದಲಿತಮ್ಮ ತಮ್ಮ ಪಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ ಬಾಹರ ಅನ್ನುವ ಮನ್ನಾ ಜೂಜಾಟ ಆಡುವ ಕಾಲಕ್ಕೆ ಸಿಕ್ಕ ಅಪರಾಧ ಜಪ್ತಾದ ಮಾಲು 1] ರೋಖ ಹಣ 7290/- ರೂ ಗಳು 2] 52 ಇಸ್ಪೇಟ ಎಲೆಗಳು ಕಿ: 00-00 ಈ ಬಗ್ಗೆ ಸ:ತ: ಜಿ ಎಸ್ ಉಪ್ಪಾರ ಪಿಎಸ್ಐ ಗ್ರಾಮೀಣ ಪಿಎಸ್ ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 13.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ತಾಳಿಕೋಟಿ ಪೊಲೀಸ ಠಾಣೆ ಗುನ್ನಾ. ನಂ: 126/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ 12.07.2021 ರಂದು 10.35 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ರಮೇಶ ತುಕಾರಾಮ ಲಮಾಣಿ ಸಾ॥ ತಮದಡ್ಡಿ ತಾಂಡಾ ತಾ॥ ತಾಳಿಕೋಟಿ ಈತನು ತನ್ನ ಪಾಯ್ದೆಗೋಸ್ಕರ ತಮದಡ್ಡಿ ತಾಂಡಾದ ಸರ್ಕಾರಿ ಕನ್ನಡ ಶಾಲೆಯ ಆವರಣದ ಸಾರ್ವಜನಿಕ ಸ್ಥಳದಲಿ ಒಂದು ರೂಪಾಯಿಗೆ 80=00 ರೂಪಾಯಿ ಕೊಡುವ ಕರಾರಿನ ಮೇಲೆ ಮಟಕಾದ ಓಸಿ ನಂಬರ ಬರೆದುಕೊಂಡು ಓಸಿ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 1) ಒಟ್ಟು ರೋಖ ಹಣ 570=00 ರೂ, 2) ಓ.ಸಿ ನಂಬರ ಬರೆದ ಚೀಟಿ ಒಂದು ಕಿ॥ 00=00, 3) ಬಾಲಪೆನ್ ಒಂದು ಕಿ॥ 00=00 ಈ ಬಗ್ಗೆ ಸ:ತ: ವಿನೋದ ದೊಡಮನಿ. ಪಿಎಸ್ಐ ತಾಳಿಕೋಟಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 13.07,2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.